ಕರ್ನಾಟಕ ಸರ್ಕಾರ

**ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯ, ಗದಗ**

ರೈತ ಭವನ, ಜನರಲ್ ಕಾರಿಯಪ್ಪ ವೃತ್ತ, ಗದಗ– 582 101

**E-mail: registrarksrdpru@gmail.com** **Office Phone: 08372-230338, Fax: 08372-297343**

ಪತ್ರ ಸಂಖ್ಯೆ: ಕ.ರಾ.ಗ್ರಾ.ಅ.ಪ.ರಾ.ವಿ:ಗದಗ:ಅಧಿಸೂಚನೆ/2017–18/ ದಿನಾಂಕ: 06/12/2017

## ಅಧಿಸೂಚನೆ

ವಿಷಯ: ಪ್ರಸ್ತುತ 2017–18ನೇ ಸಾಲಿನ ದಿನಾಂಕ 01/09/2017ರಿಂದ ಅನ್ವಯವಾಗುವಂತೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಅಧೀನದಲ್ಲಿ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವರ್ಗದ ವಸತಿ ನಿಲಯದ ವಿದ್ಯಾರ್ಥಿ/ವಿದ್ಯಾರ್ಥಿನಿಯರಿಗೆ ಪ್ರಸ್ತುತವಾಗಿ ಮಾಸಿಕ ಭೋಜನ ವೆಚ್ಚದ ಮುಂಗಡ ಹಣ ರೂ.1500/– ನೀಡುವ ಕುರಿತು.

ಉಲ್ಲೇಖ 1) ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ: ಸಕಇ 258 ಪಕವಿ 2017, ದಿನಾಂಕ: 17/04/2017.
2)ಮಾನ್ಯ ಆಯುಕ್ತರು, ಸಮಾಜ ಕಲ್ಯಾಣ ಇಲಾಖೆ ಬೆಂಗಳೂರು, ಇವರ ಆದೇಶ ಪತ್ರ ಸಂಖ್ಯೆ: ಸಕನಿ:ಇಡಿ4:ಸಿಆರ್07:2017–18, ದಿನಾಂಕ: 28/04/2017.
3) ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 06/12/2017

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1) ಮತ್ತು (2)ರನ್ವಯ, ಕರ್ನಾಟಕ ಸರ್ಕಾರದ ಸಮಾಜ ಕಲ್ಯಾಣ ಇಲಾಖೆ, ಬೆಂಗಳೂರು ಹೊರಡಿಸಿರುವ ಆದೇಶದಂತೆ ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ವಿವಿಧ ಸ್ನಾತಕೋತ್ತರ ಕೋರ್ಸ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡ ವಿದ್ಯಾರ್ಥಿ/ವಿದ್ಯಾರ್ಥಿನಿಯರು ವಿಶ್ವವಿದ್ಯಾಲಯದ ವಸತಿ ನಿಲಯಗಳಲ್ಲಿ ವಾಸಿಸುತ್ತಿದ್ದು, ಸದರಿ ವಿದ್ಯಾರ್ಥಿಗಳಿಗೆ ಪ್ರಸ್ತುತ 2017–18ನೇ ಶೈಕ್ಷಣಿಕ ಸಾಲಿನಲ್ಲಿ ಅಂದರೆ ದಿನಾಂಕ 01/09/2017ರಿಂದ ಜಾರಿಗೆ ಬರುವಂತೆ ವಿದ್ಯಾರ್ಥಿಗಳ ಕೋರಿಕೆಯ ಮೇರೆಗೆ ವಿಶ್ವವಿದ್ಯಾಲಯದಿಂದ ಮಾಸಿಕ ಭೋಜನದ ವೆಚ್ಚವು ರೂ. 1500/–(ಒಂದು ಸಾವಿರದ ಐದು ನೂರು ಮಾತ್ರ) ಗಳಂತೆ ನೀಡುವುದು. ಸದರಿ ವಿದ್ಯಾರ್ಥಿಗಳಿಗೆ ಸಮಾಜ ಕಲ್ಯಾಣ ಇಲಾಖೆಯಿಂದ ಮಾಸಿಕ ಕೊಡುವ ಬೋಜನ ವೆಚ್ಚದ ಹಣವನ್ನು ವಿಶ್ವವಿದ್ಯಾಲಯಕ್ಕೆ ಪಡೆದುಕೊಳ್ಳುವುದು. ಒಂದು ವೇಳೆ ಸಮಾಜ ಕಲ್ಯಾಣ ಇಲಾಖೆ ವಿದ್ಯಾರ್ಥಿಗಳಿಗೆ ನೇರವಾಗಿ ಹಣ ನೀಡಿದರೆ ವಿದ್ಯಾರ್ಥಿಗಳು ಸದರಿ ಹಣವನ್ನು ವಿಶ್ವವಿದ್ಯಾಲಯಕ್ಕೆ ಪಾವತಿಸತಕ್ಕದ್ದು ಎಂದು ಈ ಮೂಲಕ ಅಧಿಸೂಚಿಸಲಾಗಿದೆ.

**ಕುಲಸಚಿವರು**

**ಪ್ರತಿ:**

1. ಸೂಚನಾ ಫಲಕ – ವಿದ್ಯಾರ್ಥಿಗಳ ಗಮನಕ್ಕಾಗಿ
2. ಮಾನ್ಯ ಕುಲಪತಿಗಳ ಆಪ್ತ ಕಾರ್ಯದರ್ಶಿ, ಕ.ರಾ.ಗ್ರಾ.ಅ.ಪಂ.ರಾ ವಿಶ್ವವಿದ್ಯಾಲಯ, ಗದಗ
3. ಹಣಕಾಸು ಅಧಿಕಾರಿಗಳು, ಕ.ರಾ.ಗ್ರಾ.ಅ.ಪಂ.ರಾ ವಿಶ್ವವಿದ್ಯಾಲಯ, ಗದಗ
4. ಕಛೇರಿ ಪ್ರತಿ